ಅಧ್ಯಕ್ಷರು : ಮಾನ್ಯ ಪುಟ್ಟಣ್ಣಯ್ಯನವರು ಮಾತನಾಡುವುದು.

ಪ್ರಾಥಮಿಕ ಮತ್ತು ಪ್ರೌಢಶಾಲೆಗಳು

43(94) ಶ್ರೀ ಪುಟ್ಟಣ್ಣಯ್ಯ ಕೆ.ಎಸ್. (ಮೇಲುಕೋಟೆ) :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ರಾಜ್ಯದಲ್ಲಿರುವ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಸಂಖ್ಯೆ ಎಷ್ಟು ; ಇದುವರೆಗೂ ಮುಚ್ಚಿರುವ ಮತ್ತು ಮುಚ್ಚುವ ಸ್ಥಿತಿಗೆ ತಲುಪಿರುವ ಶಾಲೆಗಳ ಸಂಖ್ಯೆ ಎಷ್ಟು ;

(ಆ) ಸರ್ಕಾರಿ ಶಾಲಾ ಕಟ್ಟಡಗಳ ದುರಸ್ಥಿಗೆ ನಿಗದಿಪಡಿಸಲಾಗಿರುವ ಅನುದಾನ ಎಷ್ಟು; ಶಾಲಾ ಕಟ್ಟಡಗಳ ದುರಸ್ಥಿ ಕಾರ್ಯವನ್ನು ಎಂದಿನಿಂದ ಕೈಗೆತ್ತಿಕೊಳ್ಳಲಾಗುವುದು?

ಶ್ರೀ ಕಿಮ್ಮನೆ ರತ್ನಾಕರ್ (ಪ್ರಾಥಮಿಕ & ಪ್ರೌಢ ಶಿಕ್ಷಣ ಸಚಿವರು) :–

(ಅ) ರಾಜ್ಯದಲ್ಲಿರುವ ಒಟ್ಟು ಸರ್ಕಾರಿ ಪ್ರಾಥಮಿಕ ಶಾಲೆಗಳು–44,615.
ರಾಜ್ಯದಲ್ಲಿರುವ ಒಟ್ಟು ಸರ್ಕಾರಿ ಪ್ರೌಢ ಶಾಲೆಗಳು– 4,452.
ವಿಲೀನಗೊಳಿಸಲಾಗಿರುವ ಒಟ್ಟು ಸರ್ಕಾರಿ ಪ್ರಾಥಮಿಕ ಶಾಲೆಗಳು–539,
ಮುಚ್ಚುವ ಸ್ಥಿತಿಗೆ ತಲುಪಿರುವ ಶಾಲೆಗಳು–ಯಾವುದೂ ಇಲ್ಲ.

(ಆ) 2014–15 ನೇ ಸಾಲಿನಲ್ಲಿ ಸರ್ವ ಶಿಕ್ಷಣ ಅಭಿಯಾನದಡಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಕಟ್ಟಡಗಳನ್ನು ದುರಸ್ಥಿಗೊಳಿಸಲು ನಿಗದಿಪಡಿಸಲಾದ ಅನುದಾನದ ವಿವರ :

ಶಾಲೆಯ ವಿವರ	ಸಂಖ್ಯೆ	ಅನುದಾನ
ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳು	180	ರೂ.231.79 ಲಕ್ಷಗಳು
ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳು	300	ರೂ.664.82 ಲಕ್ಷಗಳು

ಈಗಾಗಲೇ ರಾಜ್ಯದ ಎಲ್ಲಾ ಡಿ.ವೈ.ಎಸ್.ಪಿ ಗಳ ಸಭೆ ಕರೆಯಲಾಗಿದ್ದು ಆಯಾ ಜಿಲ್ಲೆಗಳಿಗೆ ಬಿಡುಗಡೆ ಆಗಿರುವ ಕಾಮಗಾರಿಗಳು ಮತ್ತು ಅನುದಾನದ ವಿವರಗಳನ್ನು ನೀಡಲಾಗಿದ್ದು, ಕೂಡಲೇ ಸದರಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಅಂದಾಜು ಪಟ್ಟಿಗಳನ್ನು ಸಿದ್ಧಪಡಿಸಿಕೊಂಡು ಅನುಷ್ಠಾನಗೊಳಿಸಲು ಸೂಚಿಸಲಾಗಿದೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಎಷ್ಟು ಶಾಲೆಗಳನ್ನು ಮುಚ್ಚಲಾಗಿದೆ ಎಂದು ಪ್ರಶ್ನೆಯನ್ನು ಕೇಳಲಾಗಿದೆ

ಅದಕ್ಕೆ ವಿಲೀನಗೊಳಿಸಿರುವ ಶಾಲೆಗಳು 539 ಎಂದು ಹೇಳಿದ್ದಾರೆ. ಆದರೆ ಯಾವುದೇ ಶಾಲೆಗಳನ್ನು ಮುಚ್ಚಿಲ್ಲವೆಂದು ಹೇಳುತ್ತಾರೆ. ಪತ್ರಿಕಾ ವರದಿಯ ಪ್ರಕಾರ ಮೈಸೂರು ಜಿಲ್ಲೆ ಒಂದರಲ್ಲಿಯೇ 10,000 ಶಾಲೆಗಳನ್ನು ಮುಚ್ಚುವಂತಹ ಪರಿಸ್ಥಿತಿ ಬಂದಿದೆ. ಶಾಲೆಗಳನ್ನು ಮುಚ್ಚಿದ್ದಾರೆ. ಯಾವುದು ಸತ್ಯ ಎನ್ನುವುದು ಗೊತ್ತಿಲ್ಲ. ಒಂದು ಕಡೆ 539 ಶಾಲೆಗಳನ್ನು ವಿಲೀನಗೊಳಿಸಿದ್ದೇವೆ ಎಂದು ಹೇಳಿದ್ದಾರೆ. ಹಾಗಾದರೆ ಶಾಲೆಗಳನ್ನು ಮುಚ್ಚಿದ್ದೇವೆ ಎನ್ನುವ ತೀರ್ಮಾನ ತೆಗೆದುಕೊಳ್ಳಿ. ವಿಲೀನ ಬೇರೆ, ಮುಚ್ಚುವುದು ಬೇರೆ ಎಂದರೆ ಹೇಗೆ? ಆದ್ದರಿಂದ ಸಂಪೂರ್ಣವಾದ ವಿವರಣೆಯನ್ನು ಸರಿಯಾಗಿ ಕೊಡಬೇಕು. ಬಹಳಷ್ಟು ಶಾಲೆಗಳನ್ನು ಮುಚ್ಚಿರುವ ಪರಿಸ್ಥಿತಿ ಇದೆ. ಮುಚ್ಚಿರುವುದು ಇದೆ. ಸತ್ಯವನ್ನು ಹೊರಗಡೆ ಹೇಳಬೇಕು. ಸಚಿವರಿಗೆ ಸುಳ್ಳು ವರದಿಯನ್ನು ಕೊಟ್ಟಿರಬಹುದು.

ಶ್ರೀ ಕಿಮ್ಮನೆ ರತ್ನಾಕರ್ : ಮಾನ್ಯ ಅಧ್ಯಕ್ಷರೆ, ವರದಿಯಲ್ಲಿ ಏನು ಇದೆ, ಯಾವುದೇ ಶಾಲೆಗಳನ್ನು ಮುಚ್ಚಬಾರದು ಎನ್ನುವುದು ಕರ್ನಾಟಕ ಸರ್ಕಾರದ ನಿರ್ಧಾರ. ಈಗಾಗಲೇ ಅದನ್ನು ಘೋಷಣೆ ಮಾಡಿದ್ದೇವೆ. ಆಕಸ್ಮಾತ್ ಯಾವುದಾದರೂ ಶಾಲೆಗಳಲ್ಲಿ ಮಕ್ಕಳು ಇಲ್ಲದಿದ್ದರೂ ಸಹ ಶಾಲೆಯನ್ನು ಮುಚ್ಚುವುದಿಲ್ಲ. ಒಬ್ಬರೂ ಮಕ್ಕಳು ಆ ಶಾಲೆಗೆ ಸೇರದಿದ್ದರೆ ಆ ಶಾಲೆಗಳನ್ನು ಮುಚ್ಚುವಂತೆ consider ಮಾಡುವುದಿಲ್ಲ. ಆಕಸ್ಮಾತ್ ಆ ಮಕ್ಕಳು ಪುನಃ ಬಂದರೂ ಅದನ್ನು ಸೇರಿಸಿಕೊಳ್ಳುತ್ತೇವೆ. ಆ ರೀತಿ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಯಾವುದೇ ಶಾಲೆಯನ್ನೂ ಕೂಡ ನಾವು ಮುಚ್ಚಿದ್ದೇವೆ ಎನ್ನುವ ತಿರ್ಮಾನಕ್ಕೆ ಬಂದಿಲ್ಲ.

ಶ್ರೀ ವೈ.ಎಸ್.ವಿ. ದತ್ತಾ : ಮಾನ್ಯ ಅಧ್ಯಕ್ಷರೆ, ಮಾನ್ಯ ಪುಟ್ಟಣ್ಣಯ್ಯನವರು ಕೇಳಿರುವ ಪ್ರಶ್ನೆಯಲ್ಲಿಯೇ ಶಾಲಾ ಕೊಠಡಿಗಳ ರಿಪೇರಿ ಬಗ್ಗೆ ಹೇಳಿದ್ದಾರೆ. ಮಾನ್ಯ ಸಚಿವರಲ್ಲಿ ವಿನಮ್ರವಾಗಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಮಾಧ್ಯಮಿಕ ಸರ್ವ ಶಿಕ್ಷಣ ಅಭಿಯಾನ ಅಡಿಯಲ್ಲಿ ಶಾಲಾ ಕೊಠಡಿಗಳ ರಿಪೇರಿಗೆ ಎಂದು ಮಾಡಿದ್ದೀರಿ. ಒಬ್ಬೊಬ್ಬ ಗುತ್ತಿಗೆದಾರರಿಗೆ ನಾಲ್ಕು ಜಿಲ್ಲೆ ಕೊಟ್ಟಿದ್ದೀರಿ. ಉದಾಹರಣೆಗೆ ಚಿಕ್ಕಮಗಳೂರು ಜಿಲ್ಲೆ, ಉತ್ತರ ಕನ್ನಡ ಜಿಲ್ಲೆ, ಮಂಗಳೂರು ಜಿಲ್ಲೆ, ಉಡುಪಿ ಜಿಲ್ಲೆ, ಈ ನಾಲ್ಕೂ ಜಿಲ್ಲೆಗಳಲ್ಲಿ ಪ್ರಾಥಮಿಕ ಶಾಲಾ, ಮಾಧ್ಯಮಿಕ ಶಾಲಾ, ಪ್ರೌಢ ಶಾಲಾ ಕಟ್ಟಡಗಳ ರಿಪೇರಿ ಕೆಲಸವನ್ನು ಒಬ್ಬರೇ ಗುತ್ತಿಗೆದಾರರಿಗೆ ಕೊಟ್ಟಿದ್ದೀರಿ. ಅವನು ನಮ್ಮಲ್ಲಿ ಏನು ಮಾಡುತ್ತಿಲ್ಲ.

ನಿನ್ನೆ ನಾನು ಆ ಗುತ್ತಿಗೆದಾರನನ್ನು ಏಕಯ್ಯಾ ನಮ್ಮಲ್ಲಿ ಏನೂ ಮಾಡುತ್ತಿಲ್ಲ ಎಂದು ಕೇಳಿದರೆ, ಸಾರ್, ಎರಡು ಜಿಲ್ಲೆಗಳಲ್ಲಿ ಮಾಡಿರುವ ಕೆಲಸಕ್ಕೆ ಇನ್ನೂ ದುಡ್ಡು ಬಂದಿಲ್ಲ. ಬಿಲ್ ಕೊಟ್ಟಿಲ್ಲ. ನಾನು ಏನು ಮಾಡಲಿ ಹಾಗಾಗಿ ನಿಮ್ಮ ಜಿಲ್ಲೆಯಾದ ಕಡೂರಿನಲ್ಲಿ ಕೆಲಸ ನಿಲ್ಲಿಸಿದ್ದೇವೆ ಎಂದು ಉತ್ತರ ಹೇಳಿದರು. ಕೊಟ್ಟದ್ದು ಹಿಂದಿನ ಬಿ.ಜೆ.ಪಿ. ಸರ್ಕಾರ ಬಿ.ಜೆ.ಪಿ ಯವರು ಮಾಡಿದ ತಪ್ಪು. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಏಕೆಂದರೆ ಅವರು ಇಡೀ ಊರಿಗೆಲ್ಲಾ ಒಬ್ಬಳೇ ಪದ್ಮಾವತಿ ಎಂದು ಹೇಳಿ ಊರಿನದ್ದೆಲ್ಲಾ ಒಬ್ಬನೇ contractorಗೆ ಕೊಟ್ಟರು. ಅದೂ ತಪ್ಪೇ. ಅದಕ್ಕೆ ಅವರೂ ಹೊಣೆಗಾರರು.

ಶ್ರೀ ಎನ್. ಚಲುವರಾಯಸ್ವಾಮಿ : ಮಾನ್ಯ ಸಚಿವರೆ, ನನ್ನ ಕ್ಷೇತ್ರದಲ್ಲಿ 40 ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರೇ ಇಲ್ಲ. 100–150 ಹುದ್ದೆಗಳು ಖಾಲಿ ಇವೆ. 40 ಶಾಲೆಗಳಲ್ಲಿ ಒಬ್ಬರೂ ಶಿಕ್ಷಕರು ಇಲ್ಲದಂತಹ ಪರಿಸ್ಥಿತಿ ಇದೆ. ಇದರ ಜೊತೆಗೆ ಕಟ್ಟಡದ ವಿಚಾರಕ್ಕೆ ಬಂದರೆ, ಆಬಲವಾಡಿ, ಕೋಣಸಾಲೆ, ಮರಳ್‌ಗಾಡು, ಹೈಸ್ಕೂಲ್‌ದ್ದು foundation ಆಗಿ ಮೂರು ವರ್ಷ ಆಗಿದೆ. ಇನ್ನೊಂದಕ್ಕೆ 20 ಲಕ್ಷ ಹಣ releaseಆಗಿದ್ದು ಅದಕ್ಕೆ ಪೂರ್ಣ ಹಣವಿಲ್ಲವೆಂದು ನಿಲ್ಲಿಸಿದ್ದಾರೆ. ಈ ಮೂರು ಗ್ರಾಮಗಳಲ್ಲಿಯೂ ಸಹ ಪ್ರೌಢ ಶಾಲೆಗಳಿಗೆ ಕಟ್ಟಡದ ಕೊರತೆ ಇದ್ದು, ನಿಮ್ಮಲ್ಲಿ ಹಣ ಸರಿಯಾದ ರೀತಿಯಲ್ಲಿ ಲಭ್ಯವಿಲ್ಲದ ಕಾರಣ ಈ ರೀತಿ ಸಮಸ್ಯೆಯಾಗಿದೆ. ಶಿಕ್ಷಕರ ಕೊರತೆ, ಕಟ್ಟಡ ದುರಸ್ತಿ ಬಗ್ಗೆ ದಯಮಾಡಿ ಗಂಭೀರವಾಗಿ ತೆಗೆದುಕೊಳ್ಳಬೇಕು.

ಶ್ರೀ ಕಿಮ್ಮನೆ ರತ್ನಾಕರ್ : ಮಾನ್ಯ ಅಧ್ಯಕ್ಷರೆ, ಕಟ್ಟಡದ್ದು ಮತ್ತು ಮಾನ್ಯ ದತ್ತಾರವರು ಕೇಳಿರುವಂತಹ ವಿಷಯ ಮಾನ್ಯ ಪುಟ್ಟಣ್ಣಯ್ಯನವರು ಕೇಳಿರುವಂತಹ ಪ್ರಶ್ನೆಗೆ ಪೂರಕವಾಗಿಲ್ಲ. ಪ್ರತ್ಯೇಕವಾಗಿ ಉತ್ತರವನ್ನು ಕೊಡಬೇಕಾಗುತ್ತದೆ. ಮುಂದೆ ಅದಕ್ಕೆ ಸಂಬಂಧಪಟ್ಟ ಪ್ರಶ್ನೆ ಬರುತ್ತದೆ. ನಂತರದಲ್ಲಿ ಉತ್ತರ ಹೇಳುತ್ತೇನೆ. ಅದು ವಿಸ್ತೃತವಾಗಿ ಚರ್ಚೆಯಾಗಬೇಕಾಗಿರುವ ವಿಷಯ. Demand ಮೇಲೆ ಚರ್ಚೆಯದಾಗ ಅದರ ಪೂರ್ಣ ಉತ್ತರವನ್ನು ನಾನು ಕೊಡುತ್ತೇನೆ.

ಶ್ರೀ ಎನ್. ಚಲುವರಾಯಸ್ವಾಮಿ : ಶಿಕ್ಷಕರ ಕೊರತೆ, ಕಟ್ಟಡ ದುರಸ್ತಿಯ ಬಗ್ಗೆ ಉಪ ಪ್ರಶ್ನೆ ಕೇಳುವಂಥದ್ದು ಏನಿದೆ ? ಮಾನ್ಯ ಪುಟ್ಟಣ್ಣಯ್ಯನವರು ಸಮಗ್ರವಾಗಿ ರಾಜ್ಯದ ಪ್ರಶ್ನೆಯನ್ನು ಕೇಳಿದ್ದಾರೆ. ಅದರಲ್ಲಿಯೂ ಶಾಲಾ ಕಟ್ಟಡಗಳ ದುರಸ್ತಿ ಬಗ್ಗೆ

ಕೇಳಿದ್ದಾರೆ. ಶಾಲಾ ಕೊರತೆ ಬಗ್ಗೆ ಕೇಳಿದ್ದಾರೆ. ಮಾನ್ಯ ಸಚಿವರು ದಯಮಾಡಿ 40 ಶಾಲೆಗಳಲ್ಲಿ ಒಬ್ಬರು ಶಿಕ್ಷಕರು ಇಲ್ಲವೆಂದಾಗ ಅದರ ಕಡೆ ಗಮನಹರಿಸಿ Report ತೆಗೆದುಕೊಂಡು ನೇಮಕಾತಿ ಮಾಡಲಾಗುವುದು ಎಂದು ಹೇಳುವುದಕ್ಕೂ ತಾವು ಯೋಚನೆ ಮಾಡುತ್ತೀರಿ ಎಂದರೆ ಏನರ್ಥ ?

ಶ್ರೀ ಕಿಮ್ಮನೆ ರತ್ನಾಕರ್: ಯೋಚನೆ ಮಾಡಲಿಲ್ಲ. ಈಗಾಗಲೇ ಮಾನ್ಯ ತುಕಾರಾಂ ರವರು ಪ್ರಶ್ನೆ ಕೇಳಿದಾಗ ಇದಕ್ಕೆ ಸಂಬಂಧಿಸಿದಂತೆ ಸಮಗ್ರವಾದಂತಹ ಉತ್ತರ ಕೊಟ್ಟಿದ್ದೆ. ಅದರೊಳಗೆ ಇದು ಅಡಗಿದೆ ಎಂದು ನಾನು ಹೇಳಿದೆ. ಎಲ್ಲಿ ಅಂತಹ ಶಾಲೆಗಳು ಇವೆ ಅಲ್ಲಿ ಖಂಡಿತ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು : ಆಯಿತು. ಮಾನ್ಯ ರಮೇಶ್‌ಕುಮಾರ್‌ರವರು ಮಾತನಾಡುವುದು.

ವಿದ್ಯಾರ್ಥಿಗಳ ಮೂಲಭೂತ ಸೌಕರ್ಯ

44(332) : ಶ್ರೀ ರಮೇಶ್ ಕುಮಾರ್ ಕೆ.ಆರ್. (ಶ್ರೀನಿವಾಸಪುರ) :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ರಾಜ್ಯದ ಪಟ್ಟಣ ಪ್ರದೇಶಗಳಲ್ಲಿನ ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳು ಮತ್ತು ಶಿಕ್ಷಕರುಗಳಿಗೆ ವಿಶೇಷವಾಗಿ ಹೆಣ್ಣು ಮಕ್ಕಳ ಗೌರವ ದೃಷ್ಟಿಯಿಂದ ಅಗತ್ಯವಿರುವ ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯ ನಿರ್ಮಾಣ ವ್ಯವಸ್ಥೆ, ನೈರ್ಮಲೀಕರಣ ಪೂರ್ಣ ವ್ಯವಸ್ಥೆಯನ್ನು ಸ್ಥಳೀಯ ಪೌರ ಸಂಸ್ಥೆಗಳಿಗೆ ವಹಿಸಲು ಸರ್ಕಾರ ನಿರ್ಧರಿಸಿದೆಯೇ;

(ಆ) ಇಲ್ಲದಿದ್ದಲ್ಲಿ, ಸದರಿ ವ್ಯವಸ್ಥೆಯನ್ನು ಸಮರ್ಪಕವಾಗಿ ಜಾರಿಗೊಳಿಸಲು ಇರುವ ತೊಂದರೆಯನ್ನು ನಿವಾರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ;

(ಇ) ಸ್ಥಳೀಯ ಪೌರ ಸಂಸ್ಥೆಗಳಿಗೆ ವಹಿಸಿದ್ದಲ್ಲಿ, ಅದಕ್ಕೆ ತಗಲುವ ಅಂದಾಜು ಮೊತ್ತವೆಷ್ಟು ?

ಶ್ರೀ ಕಿಮ್ಮನೆ ರತ್ನಾಕರ್ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :–

(ಅ) ಇಲ್ಲ.

(ಆ) 2014–15 ನೇ ಸಾಲಿಗೆ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಿಗೆ ಕುಡಿಯುವ ನೀರು ಮತ್ತು ಶೌಚಾಲಯ ನಿರ್ವಹಣೆಗೆ ರೂ.4.00 ಕೋಟಿಗಳನ್ನು ಆಯವ್ಯಯದಲ್ಲಿ ಹಂಚಿಕೆ ಮಾಡಲಾಗಿದೆ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಕುಡಿಯುವ